**ದಿನಾಂಕ:11-01-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್ ಎಸ್ ಟಿ ವಕೀಲರಿಂದ :**

ಈ ದಾವೆಯನ್ನು ವಾದಿಯರು ಹಿಸ್ಸೆ ಕೋರಿ ಸಲ್ಲಿಸಿರುತ್ತಾರೆ. ನನ್ನ ಗಂಡ ದಸ್ತಗಿರಸಾಬ ರವರು ಮೃತಪಟ್ಟಿರುತ್ತಾರೆ. ನನ್ನ ಮಾವನವರಿಗೆ 5 ಜನ ಮಕ್ಕಳು ಇದ್ದಾರೆ. ಅವರುಗಳೆಂದರೆ, ನನ್ನ ಗಂಡ ದಸ್ತಗಿರಸಾಬ, ಜೈಬುದ್ದೀನಸಾಬ, ಗುಲ್ಜಾರಬಿ (ಮೃತಪಟ್ಟಿರುತ್ತಾರೆ.) ಚಾಂದಬಿ ಮತ್ತು ಅಖ್ತರಬಾನು ರವರು ಆಗಿರುತ್ತಾರೆ. ನನ್ನ ಅತ್ತೆ ಜೈನಾಬಿಯವರು ಸಹ ಮೃತಪಟ್ಟಿರುತ್ತಾರೆ. ಇವರನ್ನು ಹೊರತುಪಡಿಸಿ ನನ್ನ ಮಾವನವರಿಗೆ ಬೇರೆ ಯಾರೂ ಸಹ ಮಕ್ಕಳುಗಳು ಇರುವುದಿಲ್ಲ. ನಮ್ಮ ಮಾವನವರಿಗೆ ಸರ್ವೇ ನಂಬರ 49/1 ರಲ್ಲಿ 6 ಎಕರೆ 6 ಗುಂಟೆ ಜಮೀನು, ನಮ್ಮ ಅತ್ತೆಯ ಹೆಸರಿನಲ್ಲಿ ಸರ್ವೇ ನಂಬರ 92/4 ರಲ್ಲಿ 1 ಎಕರೆ 19 ಗುಂಟೆ ಜಮೀನು ಇದೆ. ನಮ್ಮ ಮನೆದಳಕ್ಕೆ ಸಂಬಂದಪಟ್ಟ ಆಸ್ತಿಗಳು 6 ಗುಂಟೆ ವಿಸ್ತೀರ್ಣದಲ್ಲಿವೆ. ಆ ಮನೆತನದ ಆಸ್ತಿಗಳ ಸಂಖೆ 241 ಆಗಿರುತ್ತದೆ. ಆ ಮನೆದಳದ ಆಸ್ತಿಗಳು ಬೆಳಗಾಲಪೇಟೆ ಗ್ರಾಮದಲ್ಲಿವೆ. ಅದೇ ರೀತಿ ಆಸ್ತಿ ಸಂಖ್ಯೆ 171 ಸಹ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುತ್ತದೆ. ವಿಪಿಸಿ ನಂಬರ 241 ರ ಆಸ್ತಿ ನನ್ನ ಮಾವನವರ ಹೆಸರಿನಲ್ಲಿದೆ ಇದೆ ಎಂದರೆ ಸಾಕ್ಷಿಯು ಅರ್ದ ಭಾಗದ ಆಸ್ತಿ ನನ್ನ ಹೆಸರಿನಲ್ಲಿದೆ ಅರ್ಧ ಭಾಗದ ಆಸ್ತಿ ನನ್ನ ಮಾವನವರ ಹೆಸರಿನಲ್ಲೀದೆ ಎಂದು ಸ್ವತಃ ನುಡಿಯುತ್ತಾರೆ. ಆ ಅರ್ದ ಭಾಗದ ಆಸ್ತಿಯು ಸರಕಾರದಿಂದ ಮನೆ ಮಂಜೂರಾದ ಕಾರಣ ನನ್ನ ಹೆಸರಿಗೆ ಮಾಡಿಸಿಕೊಟ್ಟಿರುತ್ತಾರೆ. ಅದೇ ರೀತಿ 241/ಎ ಆಸ್ತಿ ದಸ್ತಗಿರಸಾಬ ಯಾವಗಲರವರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಅರ್ಧ ಭಾಗದ ಆಸ್ತಿ ಅವರ ಹೆಸರಿನಲ್ಲಿದೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ಹೆಸರಿನಲ್ಲಿಯೂ ಸಹ ವಿಪಿಸಿ ನಂಬರ 241/ಎ/1 ಎಂದು ಉತಾರೆ ಇದೆ ಎಂದರೆ ಸರಿ. ವಿಪಿಸಿ ನಂಬರ 171 ರ ಆಸ್ತಿ ನನ್ನ ಅತ್ತೆ ಜೈರಾಬಿಯವರ ಹೆಸರಿನಲ್ಲಿದೆ. ನನ್ನ ಅತ್ತೆಯವರು ಸಹ ಮೃತಪಟ್ಟಿರುತ್ತಾರೆ. ದಾವಾ ಸರ್ವೇ ನಂಬರ 92/4 ರ ಆಸ್ತಿ ನಮ್ಮ ಮತ್ತು ನನ್ನ ಮೈದುನ ಜೈಬುದ್ದೀನಸಾಬ ರವರ ಹೆಸರಿನಲ್ಲಿದೆ. ಈ ಆಸ್ತಿಯನ್ನು ಸರಕಾರದಿಂದ ಸಿಗುವ ಸೌಲಭ್ಯಕ್ಕಾಗಿ ನನ್ನ ಹೆಸರಿಗೆ ಹಚ್ಚಿದ್ದರು ಎಂದರೆ ಅವರೆ ಹಚ್ಚಿದ್ದರು ಎಂದು ಸ್ವತಃ ನುಡಿಯುತ್ತಾರೆ. ಸರಕಾರದಿಂದ ಸಿಗುವ ಸೌಲಭ್ಯಕ್ಕಾಗಿ ಮತ್ತು ಸಣ್ಣ ಹಿಡುವಳಿಗಾರಿಕೆ ಮಾಡಿಕೊಳ್ಳುವ ಸಂಬಂದ ಈ ಆಸ್ತಿಯನ್ನು ನನ್ನ ಗಂಡ ಮತ್ತು ನನ್ನ ಮೈದುನನ ಹೆಸರಿಗೆ ಹಚ್ಚಿಕೊಂಡಿದ್ದರು ಎಂದರೆ ಸರಿ. ಅದೇ ರೀತಿ ದಾವಾ ಸರ್ವೇ ನಂಬರ 49/1 ರ ಆಸ್ತಿಯನ್ನು ನನ್ನ

ಗಂಡ ಜೀವಂತವಿದ್ದಾಗಲೇ ಸರಕಾರದಿಂದ ಸಿಗುವ ಸೌಲಭ್ಯಕ್ಕಾಗಿ ಮತ್ತು ಸಣ್ಣ ಹಿಡುವಳಿಗಾರಿಕೆಗಾಗಿ ತನ್ನ ಮತ್ತು ತನ್ನ ತಮ್ಮನ ಹೆಸರಿಗೆ ದಾಖಲೆ ಮಾಡಿಕೊಂಡಿದ್ದರು ಎನ್ನುವುದು ಸರಿ. ಈ ಬಗ್ಗೆ ಯಾವುದಾದರೂ ನೊಂದಾಯಿತ ಪತ್ರ ಮಾಡಿಕೊಂಡಿದ್ದರೋ ಅಥವಾ ಇಲ್ಲವೋ ಎಂಬುದನ್ನು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ನನ್ನ ಗಂಡ ಮತ್ತು ನನ್ನ ಮೈದುನನ ಹೆಸರಿಗುಗಳು ಯಾವ ದಾಖಲೆಗಳ ಆದಾರದ ಮೇಲೆ ಬದಲಾವಣೆ ಆಗಿರುತ್ತವೆ ಎನ್ನುವುದು ನನಗೆ ಗೊತ್ತಿಲ್ಲ.

(**ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ